ಪ್ರಸಾವದ ಅಂಗೀಕಾರ

ಪ್ರೊ॥ ಎ. ಲಕ್ಷ್ಮೀಸಾಗರ್ (ಕಾನೂನು ಸಚಿವರು).—ಮಾನ್ಯ ಅಧ್ಯಕ್ಷರೆ, ೧೯೮೯ನೇ ಇಸವಿಯ ಕರ್ನಾಟಕ ಕೃಷಿ ವರಮಾನ ತೆರಿಗೆ (ತಿದ್ದುಪಡಿ) ವಿಧೇಯಕವನ್ನು ಅಂಗೀಕರಿಸಬೇಕೆಂದು ಕೊರುತ್ತೇನೆ.

ಅಧ್ಯಕ್ಷರು.—ಪ್ರಸ್ತಾವ ಏನೆಂದರೆ : ೧೯೮೯ನೇ ಇಸವಿಯ ಕರ್ನಾಟಕ ಕೃಷಿವರಮಾನ ತೆರಿಗೆ (ತಿದ್ದುಪಡಿ) ವಿಧೇಯಕವನ್ನು ತಿದ್ದುಪಡಿ ಮಾಡಿರುವಂತೆ ಅಂಗೀಕರಿಸುವುದು.

ಪ್ರಸ್ತಾವ ಅಂಗೀಕರಿಸಲ್ಪಟ್ಟಿತು ಮತ್ತು ಮಸೂದೆಗೆ ಒಪ್ಪಿಗೆ ನೀಡಲಾಯಿತು.

೧೯೮೯ನೇ ಇಸವಿ ೨ ಮೈಸೂರು ಪಣ ತೆರಿಗೆ (ತಿದ್ದುಪಡಿ) ವಿಧೇಯಕ

ಪರ್ಯಾಲೋಚನಾ ಪ್ರಸ್ತಾವ

ಪ್ರೊ॥ ಎ. ಲಕ್ಷ್ಮೀಸಾಗರ್ (ಮಾನ್ಯ ಕಾನೂನು ಸಚಿವರು).—ಮಾನ್ಯ ಅಧ್ಯಕ್ಷರೆ, ೧೯೮೯ನೇ ಇಸವಿಯ ಮೈಸೂರು ಪಣ ತೆರಿಗೆ (ತಿದ್ದುಪಡಿ) ವಿಧೇಯಕವನ್ನು ಪರ್ಯಾಲೋಚಿಸಬೇಕೆಂದು ಸೂಚಿಸುತ್ತೇನೆ.

ಪ್ರಸ್ತಾಪವನ್ನು ಮಂಡಿಸಲಾಯಿತು

ಪ್ರೊ॥ ಎ. ಲಕ್ಷ್ಮೀಸಾಗರ್.—ಮಾನ್ಯ ಅಧ್ಯಕ್ಷರೆ, ಇದರಲ್ಲಿ ಪೂರ್ವಾನ್ವಯವಾಗಿ ರೂಲ್ ಮಾಡ ತಕ್ಕಂಥ ಅಧಿಕಾರ ಸರ್ಕಾರ ತೆಗೆದುಕೊಂಡಿದೆ. ಅದಕ್ಕೋಸ್ಕರ ಈ ತಿದ್ದುಪಡಿ ತಂದಿದೆ. ಇದಕ್ಕೆ ಮಾನ್ಯ ಸದಸ್ಯರು ಬೆಂಬಲ ಕೊಡಬೇಕೆಂದು ನಾನು ಮನವಿ ಮಾಡಿಕೊಳ್ಳುತ್ತೇನೆ.

ಅಧ್ಯಕ್ಷರು.—ಪ್ರಸ್ತಾವ ಏನೆಂದರೆ: "೧೯೮೯ನೇ ಇಸವಿಯ ಮೈಸೂರು ಪಣ ತೆರಿಗೆ(ತಿದ್ದುಪಡಿ) ವಿಧೇಯಕವನ್ನು ಪರ್ಯಾಲೋಚಿಸುವುದು"

ಪ್ರಸ್ತಾವ ಅಂಗೀಕರಿಸಲ್ಪಟ್ಟಿತು

ಖಂಡ ಖಂಡವಾಗಿ ವಿಧೇಯಕವನ್ನು ಪರ್ಯಾಲೋಚಿಸುವುದು

ಖಂಡ-೨

ಅಧ್ಯಕ್ಷರು.—"ಖಂಡ ಎರಡು ಈ ವಿಧೇಯಕದ ಅಂಗವಾಗಿರುತ್ತದೆ."

ಪ್ರಸ್ತಾವ ಅಂಗೀಕರಿಸಲ್ಪಟ್ಟಿತು

(೨ನೇ ಖಂಡ ವಿಧೇಯಕಕ್ಕೆ ಸೇರಿಸಲ್ಪಟ್ಟಿತು)

ಖಂಡ-೧ ಇತ್ಯಾದಿ.

ಅಧ್ಯಕ್ಷರು.—ಪ್ರಸ್ತಾವ ಏನೆಂದರೆ, ಮೊದಲನೇ ಖಂಡ ಹೆಸರು ಮತ್ತು ಅವತರಣಿಕೆಗಳು ವಿಧೇಯಕದ ಭಾಗವಾಗಿರುತ್ತವೆ.

ಪ್ರಸ್ತಾವವನ್ನು ಅಂಗೀಕರಿಸಲಾಯಿತು

(ಪ್ರಥಮ ಖಂಡ ಹೆಸರು ಅವತರಣಿಕೆಗಳನ್ನು ಈ ವಿಧೇಯಕಕ್ಕೆ ಸೇರಿಸಲಾಯಿತು)

ಪ್ರಸ್ತಾವದ ಅಂಗೀಕಾರ

ಪ್ರೊ॥ ಎ. ಲಕ್ಷ್ಮೀಸಾಗರ್.—ಮಾನ್ಯ ಅಧ್ಯಕ್ಷರೆ, ೧೯೮೯ನೇ ಇಸವಿಯ ಮೈಸೂರು ಪಣ ತೆರಿಗೆ (ತಿದ್ದುಪಡಿ) ವಿಧೇಯಕವನ್ನು ಅಂಗೀಕರಿಸಬೇಕೆಂದು ಕೋರುತ್ತೇನೆ.

ಅಧ್ಯಕ್ಷರು.—ಪ್ರಸ್ತಾಪ ಏನೆಂದರೆ: "೧೯೮೯ನೇ ಇಸವಿಯ ಮೈಸೂರು ಪಣ ತೆರಿಗೆ(ತಿದ್ದುಪಡಿ) ವಿಧೇಯಕವನ್ನು ತಿದ್ದುಪಡಿ ಮಾಡಿರುವಂತೆ ಅಂಗೀಕರಿಸುವುದು"

ಪ್ರಸ್ತಾವ ಅಂಗೀಕರಿಸಲ್ಪಟ್ಟಿತು ಮತ್ತು ಮಸೂದೆಗೆ ಒಪ್ಪಿಗೆ ನೀಡಲಾಯಿತು

೧೯೮೯ನೇ ಇಸವಿಯ ಕರ್ನಾಟಕ ಮನರಂಜನಾ ತೆರಿಗೆ(ತಿದ್ದುಪಡಿ)ವಿಧೇಯಕ

ಪರ್ಯಾಲೋಚನಾ ಪ್ರಸ್ತಾವ

ಪ್ರೊ॥ ಎ. ಲಕ್ಷ್ಮೀಸಾಗರ್,—ಮಾನ್ಯ ಅಧ್ಯಕ್ಷರೆ, ೧೯೮೯ನೇ ಇಸವಿಯ ಕರ್ನಾಟಕ ಮನರಂಜನಾ ತೆರಿಗೆ(ತಿದ್ದುಪಡಿ)ವಿಧೇಯಕವನ್ನು ಪರ್ಯಾಲೋಚಿಸಬೇಕೆಂದು ಕೋರುತ್ತೇನೆ.

ಪ್ರಸ್ತಾವವನ್ನು ಮಂಡಿಸಲಾಯಿತು

ಪ್ರೊ॥ ಎ. ಲಕ್ಷ್ಮೀಸಾಗರ್,—ಸನ್ಮಾನ್ಯ ಅಧ್ಯಕ್ಷರೆ, ಅಧೀನ ಅಧಿಕಾರಿಗಳಿಗೆ ಸರ್ಕಾರ ಮತ್ತು ಮೇಲಿನ ಅಧಿಕಾರಿಗಳು ಆಗಿಂದಾಗ್ಗೆ ಆಡಳಿತಾತ್ಮಕವಾದ ಆದೇಶಗಳನ್ನು ನೀಡುವುದಕ್ಕೆ ಅಧಿಕಾರ ತೆಗೆದ್ದ ಕೊಂಡಿದೆ. ಇಷ್ಟು ಸೂಚಕವಾಗಿರತಕ್ಕಂಥಾದ್ದು ಈ ತಿದ್ದುಪಡಿ, ಇದಕ್ಕೆ ಮಾನ್ಯ ಸದಸ್ಯರು ಅಂಗೀಕಾರ ಕೊಡಬೇಕೆಂದು ಸೂಚಿಸುತ್ತೇನೆ.

ಅಧ್ಯಕ್ಷರು.—ಪ್ರಸ್ತಾವ ಏನೆಂದರೆ, "೧೯೮೯ನೇ ಇಸವಿಯ ಕರ್ನಾಟಕ ಮನರಂಜನಾ ತೆರಿಗೆ (ತಿದ್ದುಪಡಿ)ವಿಧೇಯಕವನ್ನು ಪರ್ಯಾಲೋಚಿಸುವುದು."

ಪ್ರಸ್ತಾವ ಅಂಗೀಕರಿಸಲ್ಪಟ್ಟಿತು

ಖಂಡ ಖಂಡವಾಗಿ ವಿಧೇಯಕವನ್ನು ಪರ್ಯಾಲೋಚಿಸುವುದು

ಖಂಡ-೨

ಅಧ್ಯಕ್ಷರು.—ಖಂಡ ೨ ವಿಧೇಯಕದ ಅಂಗವಾಗಿರುತ್ತದೆ.

ಪ್ರಸ್ತಾವ ಅಂಗೀಕರಿಸಲ್ಪಟ್ಟಿತು

(ಖಂಡ ೨ ಈ ವಿಧೇಯಕಕ್ಕೆ ಸೇರಿಸಲ್ಪಟ್ಟಿತು)

ಖಂಡ ೧ ಇತ್ಯಾದಿ :

ಅಧ್ಯಕ್ಷರು.—ಪ್ರಸ್ತಾವ ಏನೆಂದರೆ: ಮೊದಲನೇ ಖಂಡ ಹೆಸರು ಮತ್ತು ಅವತರಣಿಕೆಗಳು ವಿಧೇಯಕದ ಭಾಗವಾಗಿರುತ್ತದೆ.

ಪ್ರಸ್ತಾವವನ್ನು ಅಂಗೀಕರಿಸಲಾಯಿತು

(ಮೊದಲನೇ ಖಂಡ ಮತ್ತು ಹೆಸರು ಮತ್ತು ಅವತರಣಿಕೆಗಳನ್ನು ಈ ವಿಧೇಯಕಕ್ಕೆ ಸೇರಿಸಲಾಯಿತು)

ಪ್ರಸ್ತಾವದ ಅಂಗೀಕಾರ

ಪ್ರೊ॥ ಎ. ಲಕ್ಷ್ಮೀಸಾಗರ್(ಕಾನೂನು ಸಚಿವರು),—ಮಾನ್ಯ ಅಧ್ಯಕ್ಷರೇ, ೧೯೮೯ನೇ ಇಸವಿಯ ಕರ್ನಾಟಕ ಮನರಂಜನಾ ತೆರಿಗೆ(ತಿದ್ದುಪಡಿ)ವಿಧೇಯಕವನ್ನು ಅಂಗೀಕರಿಸಬೇಕೆಂದು ಕೋರುತ್ತೇನೆ.

ಅಧ್ಯಕ್ಷರು.—ಪ್ರಸ್ತಾವ ಏನೆಂದರೆ: "೧೯೮೯ನೇ ಇಸವಿಯ ಕರ್ನಾಟಕ ಮನರಂಜನಾ ತೆರಿಗೆ (ತಿದ್ದುಪಡಿ)ವಿಧೇಯಕವನ್ನು ತಿದ್ದುಪಡಿ ಮಾಡಿರುವಂತೆ ಅಂಗೀಕರಿಸುವುದು."

ಪ್ರಸ್ತಾವ ಅಂಗೀಕರಿಸಲ್ಪಟ್ಟಿತು ಮತ್ತು ಮಸೂದೆಗೆ ಒಪ್ಪಿಗೆ ನೀಡಲಾಯಿತು

ಅಧ್ಯಕ್ಷರು.—ಮಾನ್ಯ ಕೃಷ್ಣನ್ನಾರವರೆ, ೧೯೮೯ನೇ ಇಸವಿಯ ಕರ್ನಾಟಕ ಮೋಟಾರು ವಾಹನ ತೆರಿಗೆ (ತಿದ್ದುಪಡಿ) ವಿಧೇಯಕದ ಬಗ್ಗೆ ತಾವು ಅಮೆಂಡ್‌ಮೆಂಟ್ ಕೊಟ್ಟಿರುವುದರಿಂದ ೧೯೮೯ನೇ ಇಸವಿಯ ಕರ್ನಾಟಕ ರಾಜ್ಯದ ಹಣ ವಿನಿಯೋಗಕ್ಕೆ ಸಂಬಂಧಿಸಿದ ವಿಧೇಯಕ ಆದಮೇಲೆ ತಮ್ಮದು ಇಗೆದುಕೊಳ್ಳುತ್ತೇವೆ.